**Kannada Prabha**

Date: 21-10-2019 Page No: 04

Edition: Mysore Language: Kannada

# ಎಸ್‌ಡಿಎಂ ಐಎಂಡಿಯಲ್ಲಿ ಸಮ್ಮೇಳನ

**ಮೈಸೂರು**: ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಎಸ್‌ಡಿಎಂ ಐಎಂಡಿಯಲ್ಲಿ ಮಾರುಕಟ್ಟೆ ಅಧ್ಯಯನ ಕುರಿತ ಅಂತಾರಾಷ್ಟ್ರೀಯ ಸಮ್ಮೇಳನ ಆಯೋಜಿಸಲಾಗಿತ್ತು.

ಅಟ್ಲಾಂಟ ವಿವಿಯ ಡಾ. ಶೆಬ್ರೂ ಮಾತನಾಡಿ, ಮಾನ್ಯತೆಯ ಮಟ್ಟ, ಬಿ- ಶಾಲೆಗಳ ಸಮೀಕ್ಷೆಗಳಲ್ಲಿನ ಶ್ರೇಯಾಂಕಗಳು, ಅಧ್ಯಾಪಕ ವೃಂದದ ಶೈಕ್ಷಣಿಕಮಟ್ಟ, ಸಂಶೋಧನಾ ಗುಣಮಟ್ಟ, ಸಂಶೋಧನಾ ಉಲ್ಲೇಖದ ಸೂಚ್ಯಂಕ, ಕಲಿಯಲು ಅವಕಾಶವಿರುವ ಕೋರ್ಸ್‌ಗಳ ಬಗ್ಗೆ ವಿವರಿಸಿದರು. ಒಂದು ಜನಪ್ರಿಯ ಕೋರ್ಸ್ ಅನ್ನು ಕಲಿಯುವುದು ಅಥವಾ ಕಲಿಸುವುದು ಸರಿ. ಆದರೆ ಎಲ್ಲರೂ ಅದನ್ನೇ ಕಲಿಯುತ್ತಾರೆ. ಆದ್ದರಿಂದ ಬೇರ್ಪಡಿಸುವ ಅಂಶ ಯಾವುದು? ನಾವು ಯಾವ ರೀತಿ ಬದಲಾಗಬೇಕು? ಏನು ಮಾಡಬೇಕು? ಇವುಗಳು ಬಗ್ಗೆ ಯಾವುದೇ ಸಂಸ್ಥೆಯ



ಗಮನದಲ್ಲಿರಬೇಕು ಎಂದರು. ಎಸ್‌ಡಿಎಂ ಐಎಂಡಿ ಉಪ ನಿರ್ದೇಶಕ ಡಾ.ಎಚ್. ಗಾಯತ್ರಿ, ಸಮ್ಮೇಳನದ ಮುಖ್ಯಸ್ಥ ಡಾ. ಜಯಕೃಷ್ಣನ್, ಆದಿತ್ಯಸಿಂಗ್, ನಾಗಚೇತನ್, ಚೈತನ್ಯ ಇದ್ದರು.